**:ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿ :**

ವಿಷಯ: ಶ್ರೀ ಎನ್.ಬಾಲಾಜಿರಾವ್,ರೇಖಾಗಾರರು, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಜಲಾನಯನ ಅಭಿವೃದ್ಧಿ ಇಲಾಖೆ,ರಾಯಚೂರು ಇವರು ವರ್ಗಾವಣೆಯಾದ ಕಛೇರಿಗೆ ಹಾಜರಾಗದಿರುವ ಬಗ್ಗೆ ಶಿಸ್ತು ಕ್ರಮ

ಓದಲಾಗಿದೆ:
1. ಇಲಾಖಾ ಕಛೇರಿ ಆದೇಶ ಸಂ: ಸಿಬ್ಬಂದಿ-2/ಯಾಂತ್ರಿಕ/ವರ್ಗ/25/2013-14 ದಿನಾಂಕ 31-7-2013.
2. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ರಾಯಚೂರು ಇವರ ಕಛೇರಿ ಆದೇಶ ಸಂ : ಜಿಜಅಅರಾ/ಸಿಬ್ಬಂದಿ/ವರ್ಗಾವಣೆ/2013-14 ದಿ.21-1-2014
3. ಇಲಾಖಾ ಕಛೇರಿ ಆದೇಶ ಸಂ:ಸಿಬ್ಬಂದಿ-2/ಗ್ರೂಪ್ ಸಿ ಮತ್ತು ಡಿ/ವಿಲೀನ/37/2014-15 ದಿನಾಂಕ 10-9-2014.

*****

**ಪ್ರಸ್ತಾವನೆ:-**

ಶ್ರೀ ಎನ್.ಬಾಲಾಜಿರಾವ್,ರೇಖಾಗಾರರು, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ರಾಯಚೂರು ಇವರನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೊಪ್ಪಳ ಕಛೇರಿಗೆ ಓದಲಾದ ಕ್ರಮಸಂಖ್ಯೆ (1) ರ ಆದೇಶದಲ್ಲಿ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ರಾಯಚೂರು ರವರು ಸದರಿಯವರನ್ನು ಓದಲಾದ ಕ್ರಮಸಂಖ್ಯೆ (2) ರಲ್ಲಿ ಸದರಿ ಕಛೇರಿಯಿಂದ ಬಿಡುಗಡೆ ಮಾಡಿರುತ್ತಾರೆ. ಆದರೂ ಸಹ ಶ್ರೀ ಎನ್.ಬಾಲಾಜಿರಾವ್, ರೇಖಾಗಾರರು, ವರ್ಗಾವಣೆಯಾದ ಕಛೇರಿಯ ಕರ್ತವ್ಯಕ್ಕೆ ಹಾಜರಾಗದೇ ದಿನಾಂಕ 21-1-2014 ರಿಂದ 9-9-2014 ರ ವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗಿ ಕರ್ತವ್ಯ ಲೋಪ ಎಸಗಿರುತ್ತಾರೆ. ನಂತರ ಓದಲಾದ ಕ್ರಮಸಂಖ್ಯೆ (3) ರ ಆದೇಶದಲ್ಲಿ ಸಹಾಯಕ ಕೃಷಿ ನಿರ್ದೇಶಕರು, ರಾಯಚೂರು ಕಛೇರಿಗೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಸದರಿಯವರು ತಕ್ಷಣವೇ ದಿನಾಂಕ 10-9-2014 ರಂದು ಸ್ಥಳ ನಿಯುಕ್ತಿ ಮಾಡಲಾದ ಕಛೇರಿಯ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ರೀತಿ ವರ್ಗಾವಣೆಯಾದ ಕಛೇರಿಗೆ ಕರ್ತವ್ಯಕ್ಕೆ ಹಾಜರಾಗದೇ ವೈದ್ಯಕೀಯ ಮತ್ತು ಇತರೆ ರಜೆಗಳನ್ನು ಹಾಕುತ್ತಾ ಕರ್ತವ್ಯ ಲೋಪ ಎಸಗಿರುವ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಅಮಾನತ್ತಿನಲ್ಲಿಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/14/2014-15, ದಿನಾಂಕ:16 -10-2014.**

ಈ ಕೆಳಗೆ ಸಹಿ ಮಾಡಿರುವ ಡಾ: ಸುಭೋದ್ ಯಾದವ್, ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿ, ಬೆಂಗಳೂರು ಆದ ನಾನು ಪ್ರಸ್ತಾವನೆಯಲ್ಲಿ ವಿವರಿಸಿರುವ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಎನ್.ಬಾಲಾಜಿರಾವ್, ರೇಖಾಗಾರರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 10 (1)(ಡಿ) ರನ್ವಯ ಇವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತೇನೆ.

**Suspension order**

ಅಮಾನತ್ತಿನ ಅವಧಿಯಲ್ಲಿ ನೌಕರರು ಕೇಂದ್ರಸ್ಥಾನದಲ್ಲಿ ವಾಸಿಸತಕ್ಕದ್ದು. ಹಾಗೂ ಬೇರೆ ಯಾವುದೇ ಉದ್ಯೋಗಕ್ಕೂ ಸೇರತಕ್ಕದ್ದಲ್ಲ.

ಕರ್ನಾಟಕ ನಾಗರೀಕ ಸೇವಾ ನಿಯಮ, 98 ಮತ್ತು 104 ರಲ್ಲಿನ ನಿಬಂಧನೆಗೊಳಪಟ್ಟು ನೌಕರರು ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

16.10.14.
(ಸುಭೋದ್ ಯಾದವ್)
ಕೃಷಿ ಆಯುಕ್ತರು ಹಾಗೂ
ಶಿಸ್ತು ಪ್ರಾಧಿಕಾರಿ

ಇವರಿಗೆ:
ಶ್ರೀ ಎನ್.ಬಾಲಾಜಿರಾವ್,
ರೇಖಾಗಾರರು,
ಸಹಾಯಕ ಕೃಷಿ ನಿರ್ದೇಶಕರ ಕಛೇರಿ
ರಾಯಚೂರು,
ರಾಯಚೂರು ಜಿಲ್ಲೆ.
( ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಜಿಲ್ಲೆ ಇವರ ಮೂಲಕ )

ಪ್ರತಿಗಳು:-

1. ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಇವರಿಗೆ ರವಾನಿಸುತ್ತಾ ಇದರೊಂದಿಗೆ ಲಗತ್ತಿಸಿರುವ ಆದೇಶವನ್ನು ಸಂಬಂಧಪಟ್ಟ ನೌಕರರಿಗೆ ಜಾರಿ ಮಾಡಿ ಅವರಿಂದ ದಿನಾಂಕ ಸಹಿತವಾದ ಸ್ವೀಕೃತಿಯನ್ನು ಪಡೆದು ಸಲ್ಲಿಸಲು ತಿಳಿಸಿದೆ.
2. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ರಾಯಚೂರು/ಕೊಪ್ಪಳ ಜಿಲ್ಲೆ.
3. ಸಹಾಯಕ ಕೃಷಿ ನಿರ್ದೇಶಕರು, ರಾಯಚೂರು, ರಾಯಚೂರು ಜಿಲ್ಲೆ.
4. ಕೃಷಿ ಆಯುಕ್ತರ ಆಪ್ತ ವಿಭಾಗ /ಕೃಷಿ ನಿರ್ದೇಶಕರ ಆಪ್ತ ವಿಭಾಗ.
5. ಕೇಂದ್ರ ಕಛೇರಿಯ ಸಿಬ್ಬಂದಿ-2/ಯಾಂತ್ರಿಕ / ಜೇಷ್ಟತೆ / ಸಿ.ಆರ್‌ಸೆಲ್/ ಕಾನೂನು ಘಟಕ ವಿಭಾಗಗಳಿಗೆ.
6. ಕಛೇರಿ ಆದೇಶದ ಕಡತಕ್ಕೆ / ಹೆಚ್ಚಿನ ಪ್ರತಿಗಳು.

F:\MY Documents\Enquiry 3anand\Suspension Order.doc